ಟಿ. ಸಿ. ಎಚ್. ಶಿಕ್ಷಣದ ಬಗ್ಗೆ

೧೬೧೦. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ):— ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಟಿ. ಸಿ. ಹೆಚ್. ಶಿಕ್ಷಣಕ್ಕೆ ಪ್ರವೇಶ ಪಡೆಯುವುದಕ್ಕೆ ಅಭ್ಯರ್ಥಿಗಳು ಪಿ. ಯು. ಸಿ.ಯಲ್ಲಿ ಪಾಸಾಗಬೇಕೆಂಬ ನಿಯಮವನ್ನು ಸರ್ಕಾರದವರು ಈ ವರ್ಷದಲ್ಲಿ ಜಾರಿಗೆ ತಂದಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಹಳ್ಳಿಗಾಡಿನ ಜನರಿಗೆ ಅದರಲ್ಲೂ ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗದವರಿಗೆ ತೊಂದರೆಯಾಗುತ್ತದೆ ಎಂಬುದನ್ನು ಸರ್ಕಾರದವರು ಮನಗಂಡಿರುವರೆ ?

ಇ) ಹಾಗಿದ್ದಲ್ಲಿ ಇದನ್ನು ಬದಲಾಯಿಸಿ ಹಿಂದಿನಂತೆ ಎಸ್. ಎಸ್. ಎಲ್. ಸಿ. ಯನ್ನು ನಿಗದಿ ಪಡಿಸುವುದಕ್ಕೆ ಕ್ರಮ ಕೈಗೊಳ್ಳುವರೆ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು):—

ಅ) ಹೌದು.

ಆ) ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗನ್ವಯ ಪ್ರಾಥಮಿಕ ಶಿಕ್ಷಣದ ಗುಣ ಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆ. ಆದರೂ ಸದರಿ ವರ್ಗದ ಅಭ್ಯರ್ಥಿಗಳಿಗೆ ಪ್ರವೇಶಾವಕಾಶದಲ್ಲಿ ರೀಯಾಯಿತಿ ತೋರಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಕೋಕನಟ್ ಪಿಕ್‌ಅಪ್‌ಗಳನ್ನು ನಿರ್ಮಿಸುವುದು

೧೫೧೫. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೮-೮೯ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ಕೋಕನಟ್ ಪಿಕ್‌ಅಪ್ ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ ?

ಆ) ಇಂತಹ ಉದ್ದೇಶಿತ ತೆಂಗು ಅಣಿಗಳಲ್ಲಿ ಮಾಡದ ಕೆರೆ ಹೋಬಳಿಗೆ ಎಷ್ಟು ಕೋಕನಟ್ ಪಿಕ್‌ಅಪ್ ಮಂಜೂರಾತಿ ನೀಡಲು ಸರ್ಕಾರವು ಉದ್ದೇಶಿಸಿದೆ.

ಇ) ಇದುವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ನಿರ್ಮಿಸಿರುವ ತೆಂಗು ಅಣಿಗಳು ಎಷ್ಟು ಮತ್ತು ಖರ್ಚಾಗಿರುವ ಹಣವೆಷ್ಟು ?

ಈ) ಹೊಸದುರ್ಗ ತಾಲ್ಲೂಕಿನ ಪ್ರತಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ತೆಂಗು ಅಣಿ ನಿರ್ಮಾಣ ಕಾರ್ಯವನ್ನು ಹಮ್ಮಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು):—

ಅ) ಹೌದು.

ಆ) ಇ

ಇ) ಅಣಿಗಳು ೧೪
ಖರ್ಚಾದ ಹಣ ರೂ ೧೫೫.೮೭, ೯೬೯-೬೯ ಪೈಸೆ.

ಈ) ಭೂರಹಿತ ಕೂಲಿ ಕಾರ್ಮಿಕರಿಗೆ ಒದಗಿಸುವ ಕೆಲಸ ಹಾಗೂ ಕಾರ್ಯಕ್ರಮದಂತೆ ಪಶಿತು ಜಲಾನಯನ ಪ್ರದೇಶದಲ್ಲಿ ಇದರ ಅವಶ್ಯಕತೆಯು ಹಾಗೂ ಹಣದ ಅವಕಾಶವನ್ನು ಗಮನದಲ್ಲಿಟ್ಟು ಕೊಂಡು ಹಮ್ಮಿಕೊಳ್ಳುವ ಆಲೋಚನೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರ ಪರವಾಗಿ).—ತಾವು ಕೊಟ್ಟ ಉತ್ತರದಲ್ಲಿ ಟಿಸಿಹೆಚ್ ಸೇರಬೇಕಾದರೆ ಪಿಯುಸಿ ಆಗಿರಬೇಕೆಂಬುದು ವ್ಯಕ್ತವಾಯಿತು. ತಮಗೆ ಗೊತ್ತಿರುವಂತೆ ಪೊನ್ನೆ ಪಿಯುಸಿ. ರಿಸಲ್ಟ್ ಬಂದಿದ್ದರಲ್ಲಿ ೨ ಲಕ್ಷ ವಿದ್ಯಾರ್ಥಿಗಳ ಪೈಕಿ ೬೨ ಸಾವಿರ ಜನ ಪಾಸಾಗಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ೪೫೦ ವಿದ್ಯಾರ್ಥಿಗಳು ಮತ್ತು ಹಿಂದುಳಿದ ಟ್ರೈಬ್ಸ್‌ನವರು ೧೧೦೦ ಸೇರಿದ್ದಾರೆ. ಈ ನಾಲ್ಕು ಸಾವಿರದ ಐದು ನೂರು ವಿದ್ಯಾರ್ಥಿಗಳ ಪೈಕಿ ಕೆಲವರು ಪಾಲಿಟೆಕ್ನಿಕ್‌ಗಳಿಗೂ, ಕೆಲವರು ಮೆಡಿಕಲ್ ಆಥವಾ ಇಂಜನಿಯರಿಂಗ್‌ಗೂ, ಮತ್ತೆ ಕೆಲವರು ಕಾಲೇಜಿಗೂ ಹೋಗುತ್ತಾರೆ ಈಗ ಪಿಯುಸಿ ಕಂಪಲ್ಸರಿ ಮಾಡಿರುವುದರಿಂದ ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದರ ಜೊತೆಗೆ ಇದು ಹಳ್ಳಿಗಾಡಿನ ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅವಕಾಶವನ್ನು ವಂಚಿಸಿದಂತೆ ಆಗುತ್ತದೆ. ಆದ್ದರಿಂದ ಇದನ್ನು ನೀವು ಪುನರ್ ಪರಿಶೀಲಿಸಿ ಎಸ್‌ಎಸ್‌ಎಲ್‌ಸಿ ಸಾಕು ಎಂದು ಆಜ್ಞೆ ಹೊರಡಿಸಿದರೆ ಅನುಕೂಲವಾಗುತ್ತದೆ.

ಶ್ರೀ ಬಿ. ಸೋಮಶೇಖರ್.—ಅಧ್ಯಕ್ಷರೇ, ಶ್ರೀ ಖರ್ಗೆಯವರು ವರ್ಷಗಳಿಂದಲೂ ಈ ಅನುಮಾನವನ್ನು ವ್ಯಕ್ತಪಡಿಸುತ್ತಿದ್ದಾರೆ. ನಾನೂ ಹೇಳುತ್ತಲೇ ಬಂದಿದ್ದೇನೆ. ನಾವು ಈ ರೀತಿ ಮಾಡಿರುವುದು ಗ್ರಾಮೀಣ ಶಿಕ್ಷಣದ ಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದಲೇ. ಈಗ ಏನಾಗಿದೆ ಎಂದರೆ ನಗರ ಪ್ರದೇಶಗಳಲ್ಲಿ ಉನ್ನತ ಶಿಕ್ಷಣ ಪಡೆದ ಉಪಾಧ್ಯಾಯರನ್ನೇ ನೇಮಕ ಮಾಡಿಕೊಂಡ ಕಾರಣ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರಕುತ್ತಿದ್ದು ಅದೇ ವೇಳೆಯಲ್ಲಿ ಹಳ್ಳಿಗಾಡಿನ ಕಡೆ ಕೆವಲ ಎಸ್‌ಎಸ್‌ಎಲ್‌ಸಿ ಮಂತ್ತು ಟಿಸಿಹೆಚ್ ಮಾಡಿರುವ ಅಭ್ಯರ್ಥಿಗಳು ಹೋಗುವಂಥ ಪರಿಣಾಮವಾಗಿ ಶಿಕ್ಷಣದ ಮಟ್ಟ ಕುಸಿದು ಆ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಲಭ್ಯವಾಗದಿದ್ದುದು ಹಿಂದೆ ನಡೆಯುತ್ತಿತ್ತು. ಈ ರೀತಿ ಹಿಂದೆ ಆಗಿದ್ದರಿಂದ ನಮ್ಮ ಟಿಸಿಹೆಚ್ ಸರ್ಟಿಫಿಕೇಟ್‌ಗಳಿಗೆ ಬೆಲೆಯೇ ಇಲ್ಲದಂತಾಗಿ ಅದನ್ನು ಕೇರಳ ಮುಂತಾದ ಕಡೆ ಡೀರಿಕಗ್ನೈಸ್ ಮಾಡಿದ್ದುದೂ ಉಂಟು. ಇದರಿಂದ ಈ ಕೋರ್ಸ್‌ಗಳಿಗೆ ಒಂದು ಘನತೆಯನ್ನು ತಂದುಕೊಡುವುದಕಾದ ಸಂದರ್ಭ ಬಂದಿದೆ. ಅಲ್ಲದೆ ಪಿ. ಯು. ಸಿ. ಮಾಡಿದ ವಿದ್ಯಾರ್ಥಿಗಳು ಕಾಮರ್ಸ್ ಅಥವಾ ಸೈನ್ಸ್, ಅಥವಾ ಆರ್ಟ್ಸ್ ಸಬ್ಜೆಕ್ಟ್‌ಗಳನ್ನು ಓದಿರುವುದರಿಂದ ಅಂಥವರು ಟಿಸಿಹೆಚ್ ಮಾಡಿರುವುದರಿಂದ ಅವರಿಗೆ ಹೆಚ್ಚಿನ ಪ್ರಾವೀಣ್ಯತೆ ಬಂದು ಶಿಕ್ಷಣದ ಮಟ್ಟವನ್ನು ಸುಧಾರಿಸಲು ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಇದರ ಜೊತೆಗೆ ಒಂದರಿಂದ ಏನೇ ತರಗತಿಯವರೆಗೆ ಸುಮಾರು ೧೦೫ ಲಕ್ಷದ ೭೭ ಸಾವಿರ ವಿದ್ಯಾರ್ಥಿಗಳು ೧೯೭೫ನೇ ಇಸವಿಯ ಹೊತ್ತಿಗೆ ಸೇರ್ಪಡೆಯಾಗುತ್ತಾರೆ. ಆಗ ನವಾಗೆ ೨ ಲಕ್ಷದ ೩೦ ಸಾವಿರ ಉಪಾಧ್ಯಾಯರುಗಳು ಬೇಕಾಗುತ್ತಾರೆ. ಆದರೆ ಆ ಸಮಯಕ್ಕೆ ನಾಲ್ಕು ಲಕ್ಷದ ೬೨ ಸಾವಿರ ದಷ್ಟು ವಿದ್ಯಾರ್ಥಿಗಳು ಟಿ.ಸಿ.ಎಚ್. ತರಬೇತಿ ಮುಗಿಸಿರುತ್ತಾರೆ. ಇದರಿಂದ ಅರ್ಧದಷ್ಟು ಜನರಿಗೆ ಕೆಲಸ ಸಿಕ್ಕಿ ಇನ್ನುಳಿದವರು ಐದಾರು ವರ್ಷಗಳ ಕಾಲದವರೆಗೆ ಕೆಲಸ ಇಲ್ಲದೆ ಬೀದಿ ಪಾಲಾಗಬೇಕಾಗುತ್ತದೆ ಇದರಿಂದ ೫ ವರ್ಷಗಳ ಕಾಲ ಈ ಟಿ.ಸಿ.ಎಚ್. ಶಿಕ್ಷಣ ಸಂಸ್ಥೆಗಳನ್ನು ಮುಚ್ಚಿದರೂ ಸಹ ಕೆಲಸ ಇಲ್ಲದಿರುವವರಿಗೆ ಕೆಲಸ ಕೊಡಬಹುದು. ಇವರ ಪೈಕಿ ಸಾಕಷ್ಟು ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ಸಹ ಸಿಗುತ್ತಾರೆ. ಈ ವರ್ಗದವರನ್ನು ನೇಮಕ ಮಾಡುವ ಬಗ್ಗೆ ಈಗ ಮೀಸಲು ಪದ್ಧತಿ ಏನಿದೆ ಅದನ್ನು ಕೆಡಿಸಿ ಮಾತ್ರ ಮಾಡುವುದಿಲ್ಲವೆಂಬ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಇರತಕ್ಕಂಥ ನಿಯಮವನ್ನು ಸಡಿಲಗೊಳಿಸಿಯಾದರೂ ಇವರಿಗೆ ೧೮ ಪರ್ಸೆಂಟ್ ಮೀಸಲಾತಿಯನ್ನು ನೀಡುತ್ತೇವೆ ಎಂಬ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿ ನನ್ನ ಪ್ರಶ್ನೆ ಇಷ್ಟೆ. ವಿದ್ಯಾಭ್ಯಾಸದ ಮಟ್ಟ ಕೆಳಗೆ ಹೋಗುತ್ತಿದೆ, ಇದರಿಂದ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆಂಬ ಕಾರಣದಿಂದ ಟಿ.ಸಿ.ಎಚ್. ಶಿಕ್ಷಣಕ್ಕೆ ಪಿ.ಯು.ಸಿ.ಯಲ್ಲಿ ಪಾಸಾಗಿರಬೇಕೆಂಬ ನಿಯಮವನ್ನು ಮಾಡಿದ್ದೇವೆಂಬ ವಾದವನ್ನು ನಾನು ಒಪ್ಪುವುದಿಲ್ಲ. ಎಸ್.ಎಸ್.ಎಲ್.ಸಿ.ಯಲ್ಲಿ ಯಾರು ಯಾರು ಪಾಸಾಗಿರುತ್ತಾರೆ, ಅವರ ಪೈಕಿ ಅರ್ಹತೆ ಇರುವವರು ಮಾತ್ರ ಟಿ.ಸಿ.ಎಚ್. ಶಿಕ್ಷಣಕ್ಕೆ ಹೋಗುತ್ತಾರೆ. ಎರಡು ವರ್ಷಗಳ ಕಾಲ ತರಬೇತಿ ಪಡೆದ ನಂತರ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಪ್ರಶ್ನೆ ಬರುತ್ತದೆ. ನೀವು ೧೮ ಪರ್ಸೆಂಟ್‌ಗೆ ಬದಲು ೧೯ ಪರ್ಸೆಂಟ್ ಇಲ್ಲವೇ ಇನ್ನೂ ಜಾಸ್ತಿ ಪರ್ಸೆಂಟ್‌ವರೆಗೆ ಸ್ಥಾನಗಳನ್ನು ಇವರಿಗೆ

ವೀಸಲಿಡಬಹುದು. ಆದರೆ ಇವೊತ್ತು ಈ ಟಿ.ಸಿ.ಎಚ್. ಮಾಡಿಕೊಂಡಿರುವವರು ಈ ಜನಾಂಗದಲ್ಲಿ ಸಿಗುವುದೇ ಕಷ್ಟ. ಇದೇ ಕಾರಣದಿಂದ ಈ ಹಿಂದೆ ಇದ್ದಂಥ ನಿಯಮವನ್ನು ಪದಲಿಗೊಳಿಸಬೇಕಾಗಿ ಬಂತು. ಈಗ ಪರಿಶಿಷ್ಟ ಜಾತಿ, ವರ್ಗ ಹಾಗೂ ಹಿಂದುಳಿದ ವರ್ಗದವರು ಸ್ವಲ್ಪಮಟ್ಟಿಗೆ ಸಿಗಬಹುದು. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಸಿಗುವುದಿಲ್ಲ. ಟಿ.ಸಿ.ಎಚ್. ಶಿಕ್ಷಣಕ್ಕೆ ಪ್ರವೇಶ ಪಡೆಯಲು ಪಿ.ಯು.ಸಿ. ಆಗಿರಬೇಕೆಂದು ನೀವು ನಿಯಮ ಮಾಡಿದರೆ, ಪಿ.ಯು.ಸಿ. ಆದವರು ಟಿ.ಸಿ.ಎಚ್.ಗೆ ಬದಲು ಡಿಗ್ರಿ ಕೋರ್ಸ್‌ಗಳಿಗೆ ಹೋಗುತ್ತಾರೆ. ಒಂದು ವರ್ಷ ಹೆಚ್ಚು ವ್ಯಾಸಂಗ ಮಾಡಿದರೆ ಡಿಗ್ರಿ ಕೋರ್ಸ್‌ನ್ನು ಮುಗಿಸಬಹುದೆಂಬ ಭಾವನೆ ಇವರಲ್ಲಿ ಬರುತ್ತದೆ. ಪಿ.ಯು.ಸಿ. ನಂತರ ಎರಡು ವರ್ಷಗಳ ಟಿ.ಸಿ.ಎಚ್. ತರಬೇತಿ ಪಡೆಯುವುದಕ್ಕೆ ಬದಲು ೩ ವರ್ಷಗಳ ಡಿಗ್ರಿ ಕೋರ್ಸ್‌ಗೆ ಹೋಗುತ್ತಾರೆ. ಇದರಿಂದ ಉಪಾಧ್ಯಾಯರ ಕೆಲಸಕ್ಕೆ ಭರ್ತಿ ಮಾಡುವಾಗ ಈ ಜನಾಂಗದವರಿಗೆ ಸಾಕಷ್ಟು ನೌಕರಿಗಳು ಸಿಗದಿರಬಹುದು. ನಮ್ಮ ರಾಜ್ಯದಲ್ಲಿ ಟಿ.ಸಿ.ಎಚ್. ಮಾಡಿ ಕೊಂಡವರನ್ನು ಬೇರೆ ರಾಜ್ಯದವರು ಮಾನ್ಯ ಮಾಡುವುದಿಲ್ಲವೆಂದು, ಇದಕ್ಕೆ ನಮ್ಮ ರಾಜ್ಯದ ಶಿಕ್ಷಣದ ಗುಣಮಟ್ಟ ಚೆನ್ನಾಗಿಲ್ಲವೆಂಬ ಕಾರಣ ಕೊಡುತ್ತಾರೆಂದು ತಾವು ಹೇಳಿದಿರಿ. ಹಾಗಿದ್ದರೆ ಟಿ.ಸಿ.ಎಚ್ ಗೆ ಸೇರಬೇಕಾದರೆ ಎಸ್.ಎಸ್.ಎಲ್.ಸಿ. ಯಲ್ಲಿ ಶೇಕಡಾ ೫೦ ರಷ್ಟು ಅಂಕಗಳು ಬಂದಿರಬೇಕು ಎಂದು ನಿಯಮ ಮಾಡಿ. ಅದನ್ನು ಬಿಟ್ಟು ಅವರು ಹೇಳಿದ್ದಾರೆ, ಇವರು ಹೇಳಿದ್ದಾರೆಂದು ಈ ರೀತಿ ಮಾಡಲು ಹೊರಟಿರುವುದು ಸರಿಯಲ್ಲ, ಹಾಗೆ ನೋಡಿದರೆ ನಮ್ಮ ರಾಜ್ಯದಲ್ಲಿ ಖಾಸಗಿ ಟಿ.ಸಿ.ಎಚ್. ತರಬೇತಿ ಸಂಸ್ಥೆಗಳಂತೆಯೇ ಖಾಸಗಿ ಮೆಡಿಕಲ್ ಕಾಲೇಜುಗಳು ಮತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜ್‌ಗಳು ಸಹ ಜಾಸ್ತಿ ಇವೆ. ಶಿಕ್ಷಣದ ಗುಣಮಟ್ಟ ಚೆನ್ನಾಗಿಲ್ಲವೆಂದು ಹೇಳುವುದಾದರೆ ಈ ಕಾಲೇಜುಗಳಿಗೆ ಕೊಟ್ಟಿರುವ ಮಾನ್ಯತೆಯನ್ನು ಸಹ ರದ್ದು ಮಾಡಿಬಿಡಿ. ನೀವು ಆನಂಪತಿ ಕೊಟ್ಟಿದ್ದರಿಂದ ಅವರು ಪ್ರಾರಂಭ ಮಾಡಿದ್ದಾರೆ. ಈ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳು ಟಿ.ಸಿ.ಎಚ್. ತರಬೇತಿಗೆ ಹೋಗಬಾರದೆಂಬ ಕುತಂತ್ರ ಇದರ ಹಿಂದೆ ಅಡಗಿದೆ. ಇದು ಸರಿಯಲ್ಲ. ಈ ರೀತಿ ಮಾಡಿದ್ದು ಸರಿಯೇ ಎಂದು ತಾವು ಮತ್ತೊಮ್ಮೆ ಡೀಪ್ ಆಗಿ ಸ್ಟಡಿ ಮಾಡಿ. ಮುಂಖ್ಯವಾಗಿ ಇದನ್ನು ಪುನರ್ ಪರಿಶೀಲನೆ ಮಾಡಂವುದು ಒಳ್ಳೆಯದು. ಏಕೆಂದರೆ ಎಸ್.ಎಸ್.ಎಲ್.ಸಿ.ಯಲ್ಲಿ ಪಾಸಾಗತಕ್ಕ ಎರಡು ಲಕ್ಷ ವಿದ್ಯಾರ್ಥಿಗಳ ಪೈಕಿ ಈ ಜನಾಂಗಗಳಿಗೆ ಸೇರಿದವರು ೪ ಸಾವಿರ ಮಾತ್ರ. ಇವರ ಪೈಕಿ ಕೆಲವರು ಟೀಚಿಂಗ್ ಪ್ರೊಫೆಷನ್‌ಗೆ ಹೋಗುತ್ತಾರೆ ಮತ್ತೆ ಕೆಲವರು ಪ್ರೊಫೆಷನಲ್ ಕೋರ್ಸ್‌ಗೆ ಹೋಗುತ್ತಾರೆ. ಮೆಡಿಕಲ್, ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕೋರ್ಸ್‌ಗಳಿಗೆ ಕೆಲವರು ಹೋಗುತ್ತಾರೆ. ನಾಳೆ ಏನಾದರು ನೀವು ೧೦ ಸಾವಿರದಷ್ಟು ಉಪಾಧ್ಯಾಯರ ಹುದ್ದೆಗಳಿಗೆ ಭರ್ತಿ ಮಾಡಲು ಕ್ರಮ ತೆಗೆದುಕೊಂಡ್ರು, ಪರಿಶಿಷ್ಟ ಜಾತಿ ವರ್ಗ ಹಾಗೂ ಹಿಂದುಳಿದ ವರ್ಗದವರಿಗೆ ಶೇಕಡಾ ೨೫ ರಷ್ಟು ಹುದ್ದೆಗಳನ್ನು ಮೀಸಲಿಟ್ಟರೆ, ೨೫೦೦ ಜನ ಈ ಜನಾಂಗಗಳ ಪೈಕಿ ಸಿಗಬಹುದು. ಟಿ.ಸಿ.ಎಚ್. ಮಾಡಿಕೊಳ್ಳಲು ಪಿ.ಯು.ಸಿ. ಆಗಿರಬೇಕೆಂಬ ನಿಯಮವನ್ನು ಜಾರಿಗೆ ತಂದರೆ ನಾಳೆ ನಿಮಗೆ ಎರಡೂವರೆ ಸಾವಿರ ಜನ ಈ ವರ್ಗಗಳಲ್ಲಿ ಸಿಗಲಿಲ್ಲ. ಈ ಕಾರಣದಿಂದ ನೀವು ಈ ಕೆಲವೊಂದು ಅಂಕಅಂಶಗಳನ್ನು ಗಮನದಲ್ಲಿಟ್ಟುಕೊಂಡು ಚೆನ್ನಾಗಿ ಅಭ್ಯಾಸ ಮಾಡಿ ಈ ಜನಾಂಗದವರಿಗೆ ಸಹಾಯ ಮಾಡುವಂತಹ ವ್ಯವಸ್ಥೆಯನ್ನು ಮಾಡಿ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಸಭಾಧ್ಯಕ್ಷರೆ, ಪರಿಶಿಷ್ಟ ಜನಾಂಗದವರಿಗೆ ಅವಕಾಶ ತಪ್ಪಿಸಬೇಕು ಎನ್ನುತಕ್ಕ ಕುತಂತ್ರ ಇದರಲ್ಲಿದೆ ಎಂದು ಹೇಳಿದ್ದಾರೆ. ಅದನ್ನು ಮೊದಲು ಅವರು ವಾಪಸ್ ತೆಗೆದುಕೊಳ್ಳಬೇಕು. ಕಾರಣ, ಈ ಪರಿಶಿಷ್ಟ ಜನಾಂಗದವರ ಮಕ್ಕಳ ವಿದ್ಯಾಭ್ಯಾಸ ದೃಷ್ಟಿಯಿಂದ ಇದನ್ನು ನಾವು ಮಾಡಿರತಕ್ಕಂಥಾದ್ದು. ಏಕೆಂದರೆ, ಹಳ್ಳಿಗಾಡಿನ ಪ್ರದೇಶದಲ್ಲಿ ಈ ವೀಕರ್ ಸೆಕ್ಷನ್ ಮಕ್ಕಳ ಶಿಕ್ಷಣದ ಮಟ್ಟ ಹಾಳಾಗುತ್ತಿದೆ. ಅವರ ಶಿಕ್ಷಣಮಟ್ಟ ಉತ್ತಮ ಆಗಬೇಕು ಎಂತಲೇ ನಾವು ಪ್ರಥಮ ಹೆಜ್ಜೆಯಾಗಿ ಈ ರೀತಿ ಮಾಡಿದ್ದೇವೆ. ಈಗಾಗಲೇ ಈ ಪರಿಶಿಷ್ಟ ಜನಾಂಗದ ಮಕ್ಕಳು ಪಿ.ಯು.ಸಿ ಮಾಡಿ ಬಿ.ಎ. ಬಿ.ಕಾಂ.ಗೆ ಹೋಗಿ ಫಸ್ಟ್ ಡಿವಿಜನ್ ಕ್ಲರ್ಕ್ ಸೆಕೆಂಡ್ ಡಿವಿಜನ್ ಕ್ಲರ್ಕ್ ಹುದ್ದೆಗಳಿಗೆ ಅಲೆಯಂಬುದರ ಬದಲಾಗಿ ಅದೇ ಟಿ.ಸಿ.ಹೆಚ್. ಮಾಡಿದರೆ ಸಹಸ್ರಾರು ಹುದ್ದೆಗಳು ಇಲ್ಲಿ ಸಿಗುತ್ತವೆ. ಶಿಕ್ಷಕರ ಹುದ್ದೆ ಬಹಳ ಕಡಿಮೆ ಎಂದು ಅವರು ತಿಳಿದುಕೊಂಡಿದ್ದಾರೆ. ಈ ಶಿಕ್ಷಕರ ಹುದ್ದೆ ಬಹಳ ಪವಿತ್ರವಾದ ಹುದ್ದೆ. ಈ ಹುದ್ದೆಗೆ ಜನ ಬರಬೇಕು. ಈ ಹುದ್ದೆಯನ್ನು ಅಲಂಕರಿಸಬೇಕು. ಇದರಿಂದ ಈ ಜನಾಂಗದ ಮಕ್ಕಳು ವಿದ್ಯಾಭ್ಯಾಸಕ್ಕೆ ಪಾತ್ರರಾಗಬೇಕು. ಒಟ್ಟಿನಲ್ಲಿ ಪಿ.ಯು.ಸಿ ಮಾಡಿ

ಟಿ.ಸಿ.ಹೆಚ್. ಮಾಡಿದ ವಿದ್ಯಾರ್ಥಿಗಳು ಸಿಕ್ಕದೇ ಇದ್ದಾಗ ಒಂದು ಪಕ್ಷ ಪಿಯುಸಿ ಮಾಡಿದಂಥವರನ್ನು ಶಿಕ್ಷಕರಾಗಿ ನೇಮಕ ಮಾಡಿ ನಂತರ ಟಿ.ಸಿ ಹೆಚ್.ಗೆ ಕಳಿಸತಕ್ಕ ವ್ಯವಸ್ಥೆಯನ್ನು ಬೇಕಾದರೆ ಪರಿಶೀಲನೆ ಮಾಡಬಹುದು. ಒಟ್ಟಿನಲ್ಲಿ ಈ ವರ್ಗದ ವಿದ್ಯಾರ್ಥಿಗಳಿಗೆ ಯಾವುದೇ ರೀತಿ ಶಿಕ್ಷಕರ ಹುದ್ದೆಯನ್ನು ತಪ್ಪಿಸುವ ದೃಷ್ಟಿಯಲ್ಲ. ಅವರನ್ನು ಮೀಸಲಾತಿ ಪದ್ಧತಿಯಂತೆ ತುಂಬೇ ತುಂಬುತ್ತೇವೆ. ಯಾವುದೇ ರೀತಿಯಲ್ಲಾದರೂ ಕೆಲವು ನಿಯಮಗಳನ್ನು ರಿಲ್ಯಾಕ್ಸ್ ಆದರೂ ಮಾಡಿ ತುಂಬುತ್ತೇವೆ. ಆದುದರಿಂದ ಅವರು ಏನೂ ಅನುಮಾನ ಪಡಬೇಕಾದ್ದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಾಗಿದ್ದರೆ ಪಿ.ಯು.ಸಿ. ಸೈನ್ಸ್‌ನಲ್ಲಿ ಸೆಕೆಂಡ್ ಇಯರ್ ಪಾಸ್ ಆಗಿರತಕ್ಕ ವಿದ್ಯಾರ್ಥಿಗಳ ಸಂಖ್ಯೆಯನ್ನು ತಾವು ಹೇಳಿ.

ಶ್ರೀ ಬಿ. ಸೋಮಶೇಖರ್.—ಪಿಯುಸಿ ಪಾಸ್ ಮಾಡಿದಂಥ ಸೈನ್ಸ್ ವಿದ್ಯಾರ್ಥಿಗಳು ಅಲ್ಲಿ ಹೋಗುವುದರ ಬದಲು ಇಲ್ಲಿ ಬರಲಿ. ಇಲ್ಲಿ ಫರ್ಸ್ಟ್ ಡಿವಿಜನ್ ಸ್ಕೇಲ್ ಸಿಗುತ್ತದೆ, ಒಳ್ಳೆಯ ಸಂಬಳ ಸಿಗುತ್ತದೆ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಳ್ಳೆಯ ಸಂಬಳ ಸಿಗುತ್ತಿದೆ. ಇದು ಉತ್ತಮವಾದಂಥ ಹುದ್ದೆ. ಇದಕ್ಕೆ ಏಕೆ ಬರಬಾರದು. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ಕೊಡುವಂಥ ದೃಷ್ಟಿಯಿಂದ ಇದನ್ನು ಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪಿ.ಯು.ಸಿ.ಯಲ್ಲಿ ೩ ಕ್ಯಾಟಗರಿ ಬರುತ್ತದೆ. ಒಂದನೆಯದು ಆರ್ಟ್ಸ್, ಎರಡನೆಯದು ಕಾಮರ್ಸ್ ಮತ್ತು ಮೂರನೆಯದು ಸೈನ್ಸ್. ನಾಳೆ ರೆಕ್ರೂಟ್‌ಮೆಂಟ್ ಮಾಡುವಾಗ ಗುಣಪಂಟ್ಟ ಚೆನ್ನಾಗಿರಬೇಕು ಎಂದು ಪಿಯುಸಿ ಸೈನ್ಸ್ ಪಾಸಾದವರಿಗೆ ಕೆಲವು ಹುದ್ದೆಗಳನ್ನು ರಿಸರ್ವ್ ಮಾಡಬಹುದು ಎಂದು ನಿಯಮ ಬರಬಹುದು ಏಕೆಂದರೆ, ಸೈನ್ಸ್ ಕಲಿಸಲಿಕ್ಕೆ ಅಂಥವರೇ ಬರಬೇಕು ಎಂದು. ಅದೂ ಕೂಡ ನೆಕ್ಸ್ಟ್ ಸ್ಟೆಪ್ ಬರುತ್ತದೆ. ಆಗ ಏನಾಗುತ್ತದೆಯೆಂದರೆ, ನಿಮಗೆ ಗೊತ್ತಿದ್ದಂತೆ ರಿಸರ್ವೇಷನ್‌ನಲ್ಲಿ ಸೈನ್ಸ್‌ನಲ್ಲಿ ಪಾಸಾಗತಕ್ಕಂಥವರು ಒಂದು ಹತ್ತು ಪರ್ಸೆಂಟ್ ಹುಡುಗರೂ ಕೂಡ ಸಿಕ್ಕುವುದಿಲ್ಲ. ಸ್ವಲ್ಪ ಇದೆಲ್ಲಾ ಕ್ಲಬ್ ಮಾಡಿ ನಿಮಗೆ ಹೇಳುತ್ತೇನೆ. ಆದ್ದರಿಂದ ನೀವು ಅಂಕಿಸಂಖ್ಯೆ ತರಿಸಿಕೊಂಡು ಇನ್ನೊಮ್ಮೆ ಯೋಚನೆಮಾಡಿ, ನೀವು ಆ ಜನರಿಗೆ ಸಹಾಯ ಮಾಡಬೇಕು ಅಂದರೆ you collect the facts and figures, then you go ahead.

ಶ್ರೀ ಬಿ. ಸೋಮಶೇಖರ್.—ನಿಮ್ಮ ಅನುಮಾನಕ್ಕೆ ಆಸ್ಪದವಿಲ್ಲ. ಕಾರಣ, 50% of the TTI seats should be reserved for science section ಎಂದು ಇದೆ. ಆದರಲ್ಲಿ ಸೈನ್ಸ್‌ನಲ್ಲಿ ರಿಸರ್ವೇಷನ್ ಇರುತ್ತಾರೆ. ಎಂಬ ಅನುಮಾನ ಅವರು ಪಡುತ್ತಿದ್ದರೆ ಅದು ಇರುವುದಿಲ್ಲ. ಒಟ್ಟಿನಲ್ಲಿ ೫೦ ಪರ್ಸೆಂಟ್ ಯಾವುದೇ ವರ್ಗದಿಂದ ಬಂದಿರಲಿ, ಅದನ್ನು ಸೈನ್ಸ್‌ನಲ್ಲಿ ಇಟ್ಟಿರಂತ್ತೇವೆ. ಇನ್ನು ಇರತಕ್ಕಂಥ ಸೀಟ್ಸ್‌ನಲ್ಲಿ ೧೮ ಪರ್ಸೆಂಟ್ ಈ ವ್ಯಕ್ತಿಗಳಿಗೆ ಕೊಟ್ಟೇ ಕೊಡುತ್ತೇವೆ.

ಶಿಕ್ಷಣಾಧಿಕಾರಿಗಳ ಖಾಲಿ ಹುದ್ದೆಗಳು

೧೫೧೮. ಶ್ರೀ ಎನ್. ಎಚ್. ಗೌಡ (ಕುಪಟಾ).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಮಟ್ಟದ ಶಿಕ್ಷಣಾಧಿಕಾರಿಗಳ ಖಾಲಿಯಿರುವ (ಇ.ಒ) ಹುದ್ದೆಗಳ ಸಂಖ್ಯೆ ಎಷ್ಟು ?

(ಆ) ಆ ಹುದ್ದೆಗಳನ್ನು ತುಂಬಲು ಸರ್ಕಾರವು ಕ್ರಮಕೈಗೊಳ್ಳುವುದೆ ?

(ಇ) ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

(ಅ) ೭೨

(ಆ) ಹೌದು

(ಇ) ಶೀಘ್ರವಾಗಿ ತುಂಬಲಾಗುವುದು.